ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/32/ಇಸಿಎಸ್(2)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:16.12.2024

**ಜ್ಞಾಪನ**

ವಿಷಯ: ನವೆಂಬರ್/ಡಿಸೆಂಬರ್ 2024ರ ಡಿಪ್ಲೊಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ಬೆಂಗಳೂರು ಮೌಲ್ಯಮಾಪನ ಕೇಂದ್ರದಲ್ಲಿ ಜರುಗಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಆದೇಶ ಸಂಖ್ಯೆ: ಇಡಿ 158 ಟಿಪಿಇ 2010 ದಿ:07.06.2010
2) ಸರ್ಕಾರದ ಆದೇಶ ಸಂಖ್ಯೆ: ಇಡಿ 323 ಟಿಪಿಇ 2010 ದಿ:23.12.2010
3) ಸರ್ಕಾರದ ಪತ್ರ ಸಂಖ್ಯೆ: ಇಡಿ126 ಡಿಟಿಇ 2023 ದಿ:22.01.2024
4) ದಿನಾಂಕ:25.07.2023 ರಂದು ನಡೆದ ತಾಂತ್ರಿಕ ಪರೀಕ್ಷಾ ಮಂಡಳಿಯ 184 ನೇ ವಿಶೇಷ ಕೇಂದ್ರ ಸಭೆಯ ನಿರ್ಣಯ
5) ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/06/ಇಸಿಎಸ್(1)2024 ದಿ:19.11.2024
6) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/32/ಇಸಿಎಸ್(2)/2024 ದಿ:13.12.2024
7) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/06/ಇಸಿಎಸ್(1)/2024 ದಿ:21.11.2024
8) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/32/ಇಸಿಎಸ್(2)/2024 ದಿ:16.12.2024
9) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/32/ಇಸಿಎಸ್(2)/2024 ದಿ:16.12.2024
10) ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಟಿಪಿಇ 2010 ದಿ:17.04.2015

* * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1), (2), (3) ಮತ್ತು (4) ರ ಸರ್ಕಾರದ ಆದೇಶಗಳು ಮತ್ತು ತಾಂತ್ರಿಕ ಪರೀಕ್ಷಾ ಮಂಡಳಿಯ 184ನೇ ವಿಶೇಷ ಕೇಂದ್ರ ಸಭೆಯ ನಿರ್ಣಯದನ್ವಯ ನವೆಂಬರ್/ಡಿಸೆಂಬರ್ 2024ರ ಡಿಪ್ಲೊಮಾ ಸೆಮಿಸ್ಟರ್ C-15 & C-20 ಪಠ್ಯಕ್ರಮಗಳ ಥಿಯರಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ಬೆಂಗಳೂರು ಮೌಲ್ಯಮಾಪನ ಕೇಂದ್ರದಲ್ಲಿ **ದಿನಾಂಕ:20.12.2024** ರಿಂದ ನಡೆಸಲು ಕ್ರಮಕೈಗೊಳ್ಳಲಾಗಿದ್ದು, ಮೌಲ್ಯಮಾಪನ ಕಾರ್ಯವನ್ನು ಪರೀಕ್ಷಾ ಗೌಪ್ಯತೆ ಮತ್ತು ಪಾವಿತ್ರ್ಯಯತೆಯನ್ನು ಕಾಪಾಡಿಕೊಂಡು ಯಶಸ್ವಿಯಾಗಿ ಜರುಗಿಸಲು ತಿಳಸಲಾಗಿದೆ.

ಪ್ರಸಕ್ತ ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನ ಕೇಂದ್ರಗಳ ವಿವರ/ವಿಳಾಸಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಮೌಲ್ಯಮಾಪನ ಕೇಂದ್ರ | ವಿಷಯ/ಬೋರ್ಡ್ (C-15 & C-20 ಪಠ್ಯಕ್ರಮದ ವಿಷಯಗಳು) | ಮೌಲ್ಯಮಾಪನ ಪ್ರಾರಂಭದ ದಿನಾಂಕ | ಮೌಲ್ಯಮಾಪನ ಮುಕ್ತಾಯದ ದಿನಾಂಕ |
|---|---|---|---|
| **ಎಸ್ ಜೆ (ಸರ್ಕಾರಿ) ಪಾಲಿಟೆಕ್ನಿಕ್, ಬೆಂಗಳೂರು ಕ್ಯಾಂಪಸ್:** | | | |
| i) ಎಸ್.ಜೆ.ಪಿ.ವಿಶ್ವೇಶ್ವರಯ್ಯ ಬ್ಲಾಕ್ | CE, 20PM01T | 20.12.2024 | 27.12.2024 |
| | CD, EN(ಸಿವಿಲ್ ಬೋರ್ಡ್) | 23.12.2024 | 27.12.2024 |
| | ME, 20PM01T | 20.12.2024 | 27.12.2024 |
| | MY,HP,WS(ಮೆಕ್ಯಾನಿಕಲ್ ಬೋರ್ಡ್) | 23.12.2024 | 27.12.2024 |
| | AT, AR, ID, MC, MI, MN, MT, PT, TD, ADFT, AN, CH, CR, LT, TT, PO, TX, EI, CN, IC, SR ಇತರೆ ವಿಷಯಗಳು, (ಆಟೋ ಬೋರ್ಡ್) | 23.12.2024 | 27.12.2024 |
| ii) ಎಸ್.ಜೆ.ಪಿ. ಎಲೆಕ್ಟ್ರಿಕಲ್‌ಬ್ಲಾಕ್ | E&EE, 20PM01T | 20.12.2024 | 27.12.2024 |
| iii)ಸ॥ಮಹಿಳಾ ಪಾ॥ ಮೈನ್ ಬ್ಲಾಕ್ | E&C, 20PM01T | 20.12.2024 | 27.12.2024 |
| iv)ಸ॥ಮಹಿಳಾ ಪಾ॥ ಸಿಪಿ ಬ್ಲಾಕ್ | SCIENCE | 20.12.2024 | 27.12.2024 |
| v)ಸ॥ಮುದ್ರಣ & ತಂ.ಸಂಸ್ಥೆ ಕಟ್ಟಡ | CS ,IS, 20PM01T | 20.12.2024 | 27.12.2024 |
| vi)ಜಿಆರ್‌ಐಸಿಪಿ ಮೊದಲನೇ ಮಹಡಿ | CP, LI, KAN | 23.12.2024 | 27.12.2024 |
| vii)ಜಿಆರ್‌ಐಸಿಪಿ ಎರಡನೇಮಹಡಿ | ENGLISH | 20.12.2024 | 27.12.2024 |

ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಂದ ನಿಯೋಜಿಸಲ್ಪಟ್ಟ ಉಪನ್ಯಾಸಕರ ಪಟ್ಟಿಯನ್ನು ಬಿಟಿಇ ಲಿಂಕ್ಸ್ ಆನ್ ಲೈನ್ ವೆಬ್ ಪೋರ್ಟಲ್‌ನಿಂದ ಪಡೆದು ಮೌಲ್ಯಮಾಪನ ದಿನಾಂಕವನ್ನು ಮೌಲ್ಯಮಾಪಕರ ಗಮನಕ್ಕೆ ತರಲು ಹಾಗೂ ನಿಗದಿಪಡಿಸಲಾದ ದಿನಾಂಕಗಳಂದು ಮೌಲ್ಯಮಾಪನಕ್ಕೆ ತಪ್ಪದೇ ಹಾಜರಾಗಲು ಸೂಚಿಸಿ, ಕಡ್ಡಾಯವಾಗಿ ಕಾರ್ಯ ನಿಯುಕ್ತಿಗೊಳಿಸಲು ಎಲ್ಲಾ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ ಈ ಮೂಲಕ ತಿಳಿಸಲಾಗಿದೆ.

(ವಿ.ಸೂ: ಮೇಲ್ಕಾಣಿಸಿದ ವಿಷಯಗಳ ಹೊರತು ಇತರೆ (Misc.) ವಿಷಯ/ಬೋರ್ಡ್‌ಗಳ ಉತ್ತರ ಪತ್ರಿಕೆಗಳು ಶಿಬಿರದಲ್ಲಿ ಕಂಡು ಬಂದಲ್ಲಿ ಶಿಬಿರಾಧಿಕಾರಿಗಳು, ಕಾರ್ಯದರ್ಶಿಯವರಿಗೆ ಮಾಹಿತಿ ನೀಡಿ ತಮ್ಮ ಹಂತದಲ್ಲಿ ಸಂಬಂಧಿತ ಬೋರ್ಡ್‌ನಲ್ಲಿ ಮೌಲ್ಯಮಾಪನ ಮಾಡಿಸತಕ್ಕದ್ದು.)

ಉಲ್ಲೇಖ (5)ರ ಜ್ಞಾಪನದಲ್ಲಿ ಪ್ರಸಕ್ತ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ಬೆಂಗಳೂರು ಮೌಲ್ಯಮಾಪನ ಕೇಂದ್ರಕ್ಕೆ ನೋಡಲ್ ಅಧಿಕಾರಿ, ಶಿಬಿರಾಧಿಕಾರಿ, ಸಹಾಯಕ ಶಿಬಿರಾಧಿಕಾರಿಗಳನ್ನು ನಿಯೋಜಿಸಲಾಗಿದೆ.

ಉಲ್ಲೇಖ (6) ರ ಜ್ಞಾಪನದಲ್ಲಿ ವಿವಿಧ ವಿಷಯ ಸಮಿತಿಗಳ ಮೇಲ್ವಿಚಾರಕರುಗಳನ್ನು ನೇಮಿಸಲಾಗಿದ್ದು, ಉಲ್ಲೇಖ (7)ರ ಜ್ಞಾಪನದಲ್ಲಿ ಸದರಿ ಅಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯಗಳ ವಿವರಗಳನ್ನು ನೀಡಲಾಗಿದ್ದು, ಸದರಿ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ಆದೇಶಿಸಲಾಗಿದೆ.

ಉಲ್ಲೇಖ (8) ರ ಸುತ್ತೋಲೆಯಲ್ಲಿ ನೀಡಲಾಗಿರುವ ಮಾರ್ಗಸೂಚಿಗಳನ್ವಯ ಪ್ರತಿಯೊಬ್ಬ ಮೌಲ್ಯಮಾಪಕರು ಪ್ರತಿ ದಿನಕ್ಕೆ 25 ಥಿಯರಿ ಉತ್ತರ ಪತ್ರಿಕೆ/30 ಡ್ರಾಯಿಂಗ್ ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡತಕ್ಕದ್ದು ಹಾಗೂ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶ ಸಂಖ್ಯೆ: ಇಡಿ 90 ಟಿಪಿಇ 2022 ದಿನಾಂಕ:22.11.2024 ರನ್ವಯ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳಿಗೆ ಅರ್ಹರಿರುತ್ತಾರೆ.

ಮಾನ್ಯ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ಒಟ್ಟು ಮೌಲ್ಯಮಾಪನ ಕಾರ್ಯದ ಮೇಲಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುವರು ಹಾಗೂ ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಮೇಲುಸ್ತುವಾರಿ ವಹಿಸುವರು.

ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ರವರು ಮೌಲ್ಯಮಾಪನ ದಿನಗಳಲ್ಲಿ ಎಲ್ಲಾ ಮೌಲ್ಯಮಾಪನ ಕೇಂದ್ರಗಳಿಗೆ ಭೇಟಿ ನೀಡಿ ಮೌಲ್ಯಮಾಪನಕ್ಕೆ ಮಾಡಿರುವ ವ್ಯವಸ್ಥೆಯನ್ನು ಪರಿಶೀಲಿಸಿ ಯಾವುದೇ ಕುಂದು ಕೊರತೆ ಕಂಡು ಬಂದಲ್ಲಿ ಬಗೆಹರಿಸಲು ಕ್ರಮ ಕೈಗೊಂಡು ಮೌಲ್ಯಮಾಪಕರಿಗೆ ಸೂಕ್ತ ಮಾರ್ಗದರ್ಶನ ನೀಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿದೆ.

ಶ್ರೀ ಜಿ.ಶ್ರೀಕಾಂತ್, ಜಂಟಿ ನಿರ್ದೇಶಕರು (ಪರೀಕ್ಷೆ), ಶ್ರೀ ಕೆ.ಜಿ.ನಾಗಭೂಷಣ್ ಉಪ ನಿರ್ದೇಶಕರು (ಪರೀಕ್ಷೆ) ಮತ್ತು ಹಿರಿಯ ತಾಂತ್ರಿಕ ಸಹಾಯಕರುಗಳು ಕಾಲಕಾಲಕ್ಕೆ ಮೌಲ್ಯಮಾಪನ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕೆಂದು ತಿಳಿಸಲಾಗಿದೆ.

ವಿದ್ಯಾರ್ಥಿಗಳ ಫಲಿತಾಂಶಗಳನ್ನು ಶೀಘ್ರವಾಗಿ ನೀಡಲು ಅನುವಾಗುವಂತೆ, ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳಿಗೆ ಸಂಬಂಧಪಟ್ಟ ಮಾರ್ಕ್ಸ್‌ಲಿಸ್ಟ್‌ಗಳಿಂದ ಅಂಕಗಳನ್ನು ಕೀಯಿಂಗ್ ಮಾಡಿಸುವ ಸಂಬಂಧ ತಾಂತ್ರಿಕ ನೆರವಿಗಾಗಿ ಶ್ರೀ ಹರೀಶ ಶೆಟ್ಟಿ, ಪ್ರಾಚಾರ್ಯರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು, ಶ್ರೀಮತಿ ಪದ್ಮಾವತಿ ಕೆ.ಜಿ. ಸಿಸ್ಟಂ ಅನಾಲಿಸ್ಟ್, ಗಣಕ ಕೇಂದ್ರ, ತಾಂ.ಪ.ಮಂ. ಮತ್ತು ಶ್ರೀಮತಿ ಸುಷ್ಮ ಬಿ.ಹೆಚ್. ಪ್ರೋಗ್ರಾಮರ್ ಗಣಕ ಕೇಂದ್ರ, ತಾಂ.ಪ.ಮಂ. ಇವರುಗಳನ್ನು ಉಲ್ಲೇಖ (9)ರ ಅನ್ವಯ ಕೀಯಿಂಗ್ ಅಧಿಕಾರಿಗಳು ಸಂಪರ್ಕಿಸಲು ತಿಳಿಸಲಾಗಿದೆ.

ಮುಂದುವರೆದು, ಸರ್ಕಾರಿ/ ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಯ ಯಾವುದೇ ಉಪನ್ಯಾಸಕರು, C-15 ಪಠ್ಯಕ್ರಮದ ವಿಷಯಗಳ ಅಥವಾ C-20 ಪಠ್ಯಕ್ರಮದ Pathway ವಿಷಯಗಳ ಪ್ರಶ್ನೆಪತ್ರಿಕೆ ರಚನಾಕಾರರು/ ಮುಖ್ಯ ಮೌಲ್ಯಮಾಪಕರಾಗಿದ್ದಲ್ಲಿ, ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರು ಸದರಿಯವರನ್ನು ಯಾವುದೇ ಕಾರಣಕ್ಕೂ ಸಂಸ್ಥೆಯಲ್ಲಿ ಉಳಿಸಿಕೊಳ್ಳದೇ ಮೌಲ್ಯಮಾಪನ ಕಾರ್ಯಕ್ಕೆ ಬಿಡುಗಡೆಗೊಳಿಸತಕ್ಕದ್ದು.

ಮೌಲ್ಯಮಾಪನ ಕಾರ್ಯಕ್ಕೆ ಗೈರು ಹಾಜರಾಗುವ ಉಪನ್ಯಾಸಕರು ಹಾಗೂ ಮೌಲ್ಯಮಾಪನ ಕಾರ್ಯಕ್ಕೆ ನೇಮಿಸಲಾದ ಉಪನ್ಯಾಸಕರುಗಳನ್ನು ಬಿಡುಗಡೆಗೊಳಿಸದ ಪ್ರಿನ್ಸಿಪಾಲರುಗಳ ವಿರುದ್ಧ ತಾಂತ್ರಿಕ ಪರೀಕ್ಷಾ ಮಂಡಳಿಯ ನಿಯಮಾವಳಿ, ಉಲ್ಲೇಖ (10) ರ ಸರ್ಕಾರಿ ಆದೇಶ ಮತ್ತು 1983 ರ ಶಿಕ್ಷಣ ಕಾಯ್ದೆ ನಿಯಮ 28ರ ಅಡಿಯಲ್ಲಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಲಾಗಿದೆ.

ನಿರ್ದೇಶಕರು
**ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ,

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ
2. ಬೆಂಗಳೂರು ಮೌಲ್ಯಮಾಪನ ಕೇಂದ್ರದ ನೋಡಲ್ ಅಧಿಕಾರಿಗಳು/ ಶಿಬಿರಾಧಿಕಾರಿಗಳು/ ಸಹಾಯಕ ಶಿಬಿರಾಧಿಕಾರಿಗಳು/ ಮೌಲ್ಯಮಾಪನ ಶಿಬಿರ ಮೇಲ್ವಿಚಾರಕರು/ಕೀಯಿಂಗ್ ಅಧಿಕಾರಿಗಳು–ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ:
1) ಶ್ರೀ ಹರೀಶ ಶೆಟ್ಟಿ, ಪ್ರಾಚಾರ್ಯರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು
2) ಶ್ರೀಮತಿ ಕೆ.ಜಿ.ಪದ್ಮಾವತಿ, ಸಿಸ್ಟಂಅನಾಲಿಸ್ಟ್, ಗಣಕ ಕೇಂದ್ರ, ತಾಂ.ಪ.ಮಂ.
3) ಶ್ರೀಮತಿ ಬಿ.ಹೆಚ್.ಸುಷ್ಮ, ಪ್ರೋಗ್ರಾಮರ್, ಗಣಕ ಕೇಂದ್ರ, ತಾಂ.ಪ.ಮಂ. ಬೆಂಗಳೂರು
4) ಹಿರಿಯ ತಾಂತ್ರಿಕ ಸಹಾಯಕರುಗಳು, ತಾಂ.ಪ.ಮಂ. ಬೆಂಗಳೂರು
5) ಇಬಿಎಲ್ ವಿಭಾಗ, ತಾಂ.ಪ.ಮಂ. ಬೆಂಗಳೂರು
6) ಮಾನ್ಯ ಆಯುಕ್ತರವರ ಆಪ್ತ ಶಾಖೆ
7) ನಿರ್ದೇಶಕರವರ ಆಪ್ತ ಶಾಖೆ
9) ಇ-ಆಡಳಿತ – ವೆಬ್ ಸೈಟ್ ನಲ್ಲಿ ಪ್ರಕಟಿಸಲು